ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.

ಸಿಸಿ ನಂಃ 2594/2022

ಪಿ ಡಬ್ಲುಃ 02

ಸಿ ಡಬ್ಲುಃ 01

| | |
|---|---|
| ಸಾಕ್ಷಿದಾರರ ಹೆಸರು | ಮಹಂತೇಶ ನಾಯಕ |
| ತಂದೆಯ ಹೆಸರು | ಉದಯ ನಾಯಕ |
| ವಯಸ್ಸು | 34 |
| ಉದ್ಯೋಗ | ಪಿ ಎಸ್ ಐ ಹೊನ್ನಾವರ |
| ವಾಸ್ತವ್ಯ | ಹೊನ್ನಾವರ |

ಸಾಕ್ಷಿಯನ್ನು ದಿನಾಂಕಃ 10-01-2024 ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ನಾನು 2021 ರಿಂದ ಹೊನ್ನಾವರ ಪೋಲಿಸ್ ಠಾಣೆಯಲ್ಲಿ ಪಿ. ಎಸ್. ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ 20.02.2022 ರಂದು ರಾತ್ರಿ 12.30 ರ ಸಮಯದಲ್ಲಿ ಚಾಸಾ 6, 7, 9 ರವರವರೊಂದಿಗೆ ಹೊನ್ನಾವರ ಶಹರದ ಗಸ್ತು ಕರ್ತವ್ಯದಲ್ಲಿದ್ದಾಗ ಚಾಸಾ 8 ರವರು ನನಗೆ ದೂರವಾಣಿ ಕರೆ ಮಾಡಿ ಬೈಲುಗದ್ದೆ ಜಾತ್ರಾ ಬಂದೋಬಸ್ತಿಗೆ ಹೋಗುತ್ತಿರುವಾಗ ಬೈಲುಗದ್ದೆ ಕ್ರಾಸ್ ಬಳಿ ಒಂದು ಮೆರೂನ್ ಬಣ್ಣದ ಟಾಟಾ ಸುಮೋ ನೊಂದಣಿ ಸಂಖ್ಯೆ ಕೆ ಎ 34 ಎಮ್ 5050 ರ ಚಾಲಕನು ಮೋಟಾರು ಸೈಕಲ್ಲಿಗೆ ಡಿಕ್ಕಿ ಮಾಡಿ ಕೈ ಸನ್ನೆ ಮಾಡಿದರೂ ನಿಲ್ಲಿಸದೇ ಅಜಾಗರೂಕತೆ ಮತ್ತು ನಿರ್ಲಕ್ಷತನದಿಂದ ಚಾಲಯಿಸಿಕೊಂಡು ಹೊನ್ನಾವರ ಕಡೆ ಹೋಗಿರುವುದಾಗಿ ನನಗೆ ಮಾಹಿತಿ ನೀಡಿರುತ್ತಾರೆ. ಕೂಡಲೇ ನಾನು ಸಿಬ್ಬಂದಿಗಳಾದ ಚಾಸಾ 6 , 7, 9 ರವರನ್ನು ಕರೆದುಕೊಂಡು ಗೇರುಸೊಪ್ಪ ಸರ್ಕಲ್ ಹತ್ತಿರ ನಿಂತಿರುವಾಗ ರಾತ್ರಿ 1 ಗಂಟೆ ಸಮಯದಲ್ಲಿ ಸದ್ರಿ ಟಾಟಾ ಸುಮೋ ಗೇರುಸೊಪ್ಪ ಕಡೆಯಿಂದ ಬರುವುದನ್ನು ಕಂಡು ಅದನ್ನು ನಿಲ್ಲಿಸಲು ಪ್ರಯತ್ನಿಸಿದಾಗ ಸದ್ರಿ ವಾಹನದ ಚಾಲಕ ಸ್ವಲ್ಪ ಹಿಂದೆಯೇ ವಾಹನ ನಿಲ್ಲಿಸಿ ಅಲ್ಲಿಂದ ಓಡಿಹೋಗಿರುತ್ತಾನೆ. ನಂತರ ಸದ್ರಿ ವಾಹನದ ಡಿಕ್ಕಿ ತೆಗೆದು ಪರಿಶೀಲಿಸಿದಾಗ ಅದರಲ್ಲಿ ಟಾರ್ ಪಾಲ್ ಸುತ್ತಿದಂತಿದ್ದು ಅದನ್ನು ತೆರೆದು ನೋಡಿದಾಗ ಅದರಲ್ಲಿ ದನದ ಮಾಂಸ ಇರುವುದು ಕಂಡುಬಂದಿರುತ್ತದೆ. ನಂತರ ಚಾಸಾ 6 ರವರ ಮೂಲಕ ಚಾಸಾ 2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ಸದ್ರಿ ಮಾಹಿತಿ ತಿಳಿಸಿ ಅವರ ಒಪ್ಪಿಗೆ ಪಡೆದು ವಾಹನವನ್ನು ಪರಿಶೀಲಿಸಿದಾಗ ಅದು ಮರೂನ್ ಬಣ್ಣದ ಟಾಟಾ ಸುಮೋ ಆಗಿದ್ದು ಅದರ ಸಂಖ್ಯೆ ಕೆ ಎ 34 ಎಮ್ 5050 ಆಗಿರುತ್ತದೆ. ಅದರ ಎದುರಿನ ಗ್ಲಾಸ್ ನಲ್ಲಿ ಲೆಜೆಂಡ್ ಎಂದು ಬರೆಯಲಾಗಿತ್ತು. ಅದರ ಡಿಕ್ಕಿಯನ್ನು ಪರಿಶೀಲಿಸಿದಾಗ ಹಸಿರು , ನೀಲಿ ಮತ್ತು ಕಪ್ಪು ಬಣ್ಣದ ತಾಡಪಾಲಿನಲ್ಲಿ ಸುಮಾರು 200 ಕೆ ಜಿಯಷ್ಟು ದನದ ಮಾಂಸ ಇರುವುದು ಕಂಡುಬಂದಿರುತ್ತದೆ. ಸ್ಥಳದಲ್ಲಿ ಫೋಟೊ ತೆಗೆದು ಸ್ವತ್ತುಗಳನ್ನು ವಶಕ್ಕೆ ಪಡೆದು 1.15 ರಿಂದ 2.15 ರವರೆಗೆ ಪಂಚನಾಮೆ ಜರುಗಿಸಿರುತ್ತೇವೆ. ನಂತರ ಠಾಣೆಗೆ ತೆರಳಿ ಸರ್ಕಾರದ ಪರ ದೂರನ್ನು ನೀಡಿರುತ್ತೇನೆ. ಪಂಚನಾಮೆಯನ್ನು ನಿಪಿ 1 ಎಂದು ಗುರುತಿಸಲಾಗಿದ್ದು

ಸಾಕ್ಷಿಯ ಸಹಿಯನ್ನು ನಿಪಿ 1 ಬಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಸದ್ರಿ ದಾಖಲೆಯನ್ನು ನಿಪಿ. 7 ಎಂದು , ಸಾಕ್ಷಿಯ ಸಹಿಯನ್ನು ನಿಪಿ. 7 ಎ ಎಂದು ಗುರುತಿಸಲಾಯಿತು. ದಿಃ 03.03.2022 ರಂದು ಆರೋಪಿಯನ್ನು ಸಿಬ್ಬಂದಿಗಳು ದಸ್ತಗಿರಿ ಮಾಡಿ ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿದಾಗ ಆರೋಪಿಯನ್ನು ನೋಡಿ ಗುರುತಿಸಿ ದಿಃ 04.03.2022 ರದು ಈ ಕುರಿತು ಮರು ಹೇಳಿಕೆ ನೀಡಿರುತ್ತೇನೆ. ಪಂಚನಾಮೆ ಸಮಯದಲ್ಲಿ ಪೋಟೊ ತೆಗೆದಿರುತ್ತೇನೆ. ಸಾಕ್ಷಿ ನಿಪಿ 2 ಮತ್ತು 3 ರ ಪೋಟೊ ನೋಡಿ ಗುರುತಿಸುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ನೀಲಿ , ಹಸಿರು ಮತ್ತು ಕಪ್ಪು ಬಣ್ಣದ ತಾಡಪಾಲುಗಳನ್ನು ನೊಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಎಂ ಒ 1 ರಿಂದ 3 ಎಂದು ಗುರುತಿಸಲಾಯಿತು. ಸದ್ರಿ ದಿನ ವಾಹನ ಚಲಾಯಿಸುತ್ತಿದ್ದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಆರೊಪಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ನಿಪಿ 2 ಮತ್ತು 3 ರ ಪೋಟೋದಲ್ಲಿರುವ ಟಾಟಾ ಸುಮೋ ವಾಹನ ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲುಃ ಶ್ರೀ ವಿ. ಆರ್. ಎನ್. ವಕೀಲರಿಂದಃ</u>**

ಆರೋಪಿ ಬೈಕಿಗೆ ಅಪಘಾತಪಡಿಸಿದ ಕುರಿತು ಇದೇ ಪ್ರಕರಣದಲ್ಲಿ ಪ್ರಕರಣ ದಾಖಲಿಸಿರುತ್ತೇನೆ. ಬೈಕ್ ಸಂಖ್ಯೆಯನ್ನು ನಮ್ಮ ಸಿಬ್ಬಂದಿ ನನಗೆ ತಿಳಿಸಿರುವುದಿಲ್ಲ. ದೂರನ್ನು ದಾಖಲಿಸುವ ಪೂರ್ವದಲ್ಲಿ ಸದ್ರಿ ಬೈಕ್ ಸಂಖ್ಯೆಯ ಬಗ್ಗೆ ನಾನು ವಿಚಾರಿಸಿರುವುದಿಲ್ಲ. ನನ್ನ ಪ್ರಕಾರ ಈ ಪ್ರಕರಣ ಬೈಕಿಗೆ ಅಪಘತಪಡಿಸಿದ ಬಗ್ಗೆ ಮತ್ತು ದನದ ಮಾಂಸ ಸಾಗಾಟ ಮಾಡಿದ ಬಗ್ಗೆ ಇರುತ್ತದೆ. ನಂತರ ಸದ್ರಿ ಬೈಕ್ ನ ಬಗ್ಗೆ ವಿಚಾರಣೆ ಮಾಡಿದ ಬಗ್ಗೆ ತನಿಖಾಧಿಕಾರಿಗೆ ಗೊತ್ತಿರಬಹುದು. ಮರು ಹೇಳಿಕೆ ನೀಡುವ ಸಮಯದಲ್ಲಿ ನನಗೆ ಬೈಕನ್ನು ತೋರಿಸಿರುವುದಿಲ್ಲ. ಗೇರುಸೊಪ್ಪ ಸರ್ಕಲ್ ನ ಉತ್ತರ ದಿಕ್ಕಿಗೆ ಗೇರುಸೊಪ್ಪ ರಸ್ತೆ ಬರುತ್ತದೆ. ಅಲ್ಲಿ ಕುಮಟಾ ರಸ್ತೆ ಪಶ್ಚಿಮ ದಿಕ್ಕಿಗೆ ಹಾದು ಹೋಗಿದೆ. ನಾನು ಪ್ರಥಮ ಬಾರಿಗೆ 150-200 ಅಡಿ ದೂರದಲ್ಲಿ ಸದ್ರಿ ವಾಹನ ನೋಡಿರುತ್ತೇನೆ. ನಮ್ಮಿಂದ 60 ಅಡಿ ದೂರದವರೆಗೂ ಸದ್ರಿ ವಾಹನ ಬಂದಿರುತ್ತದೆ. ಆಗ ಕತ್ತಲೆಯಾದ ಕಾರಣ ಸದ್ರಿ ವಾಹನ ಚಾಲಕ ನನಗ ಸರಿಯಾಗಿ ಗೊತ್ತಾಗಿರುವುದಿಲ್ಲ ಎಂದರೆ ಸರಿ . ಸದ್ರಿ ರಸ್ತೆ ಗೇರುಸೊಪ್ಪ ಸರ್ಕಲ್ ಕಡೆ ಇಳಿಜಾರಿನಿಂದ ಇದೆ ಎಂದರೆ ಸರಿ. ಸದ್ರಿ ವಾಹನವನ್ನು ದಕ್ಷಿಣ ದಿಕ್ಕಿಗೆ ಮುಖ ಮಾಡಿ ರಸ್ತೆಯ ಎಡಬದಿಗೆ ನಿಲ್ಲಿಸಿರುತ್ತಾರೆ. ನಾವು ವಾಹನ ಪರಿಶೀಲನೆ ಮಾಡುವ ಪೂರ್ವದಲ್ಲಿ ಪಂಚರನ್ನು ಕರೆಸಿರುವುದಿಲ್ಲ. ಪರಿಶೀಲನೆ ಮಾಡಿ ಖಾತ್ರಿಯಾದ ಮೇಲೆ ಪಂಚರನ್ನು ಕರೆಸಿರುತ್ತೇವೆ. ಆ ರೀತಿ ಪರಿಶೀಲಿಸಿದಾಗ ಸದ್ರಿ ಟಾಟಾ ಸುಮೋದ ಮುಂದಿನ ಭಾಗದ ಬಂಪರ್ ಬಲ ಭಾಗದ ಹತ್ತಿರ ಸ್ವಲ್ಪ ತರಚಿದ ಗುರುತು ಇತ್ತು. ಈ ವಿಚಾರವನ್ನು ಪಂಚನಾಮೆಯಲ್ಲಿ ಬರೆದಿರುವುದಿಲ್ಲ. ಅದನ್ನು ಬರೆಯಲು ನಮಗೆ ತೊಂದರೆ ಇರಲಿಲ್ಲ. ಆ ಸಮಯದಲ್ಲಿ ನಾನು ಅಪಘಾತದ ಬಗ್ಗೆ ತನಿಖೆ ಮಾಡಿದ್ದು ಇರುವುದಿಲ್ಲ. ದೂರು ನೀಡುವಾಗ ಕಲಂ 279 ನ್ನು ಸೇರಿಸಿ ದೂರನ್ನು ನೀಡಿರುತ್ತೇನೆ. ಚಾಸಾ 2 ರವರು ಸ್ಥಳೀಯರಾಗಿದ್ದು ಅವರ ಪರಿಚಯ ಇದೆ. ಚಾಸಾ 2 ರವರು ಮೊದಲು ರೌಡಿ ಶೀಟರ್ ಆಗಿರಬಹುದು, ನನಗೆ ಮಾಹಿತಿ ಇಲ್ಲ. ಸಾಕ್ಷಿ ಮುಂದುವರಿದು ಅವರು ಮೊದಲು ರೌಡಿ ಶೀಟರ್ ಆಗಿದ್ದರು ಎಂದು ನುಡಿಯುತ್ತಾರೆ. ಈ ಅವರ ವಿರುದ್ಧ ಯಾವದೇ ಪ್ರಕರಣ ಇರುವುದಿಲ್ಲ. ಈಗಲೂ ಸಹಾ ಅವರ ವಿರುದ್ಧ 3-4 ಪ್ರಕರಣಗಳು ಇವೆ ಎಂದರೆ ಸರಿಯಲ್ಲ. ಆತ 2-3 ಪ್ರಕರಣಗಳಲ್ಲಿ ಪಂಚರಾಗಿ ಸಹಿ ಮಾಡಿರುತ್ತಾರೆ. ಆತ 25 ಪ್ರಕರಣಗಳಲ್ಲಿ ಪಂಚರಾಗಿ ಸಹಿ ಮಾಡಿರುತ್ತಾನೆ ಎಂದರೆ ಸರಿಯಲ್ಲ.

ಸದ್ರಿ ವಾಹನದಲ್ಲಿಯೇ ಚಾವಿ ಇಡಲಾಗಿತ್ತು. ಸದ್ರಿ ವಾಹನವನ್ನು ಚಾಸಾ 3 ರವರು ಠಾಣೆಗೆ ತಂದಿರುತ್ತಾರೆ. ಪಂಚನಾಮೆಗೆ ಪಂಚರು ಮಾಹಿತಿ ಕೊಟ್ಟಿರುತ್ತಾರೆ. ಸದ್ರಿ ವಾಹನದಲ್ಲಿ ಯಾವದೇ ದಾಖಲೆ ಸಿಕ್ಕಿರುವುದಿಲ್ಲ. ತಾಡಪತ್ರೆಯಲ್ಲಿ ಮಧ್ಯ ಮಾಂಸ ಇಟ್ಟು ಅದನ್ನು ಮುಚ್ಚಿರುತ್ತಾರೆ. ಮೊದಲು ಇದ ಸ್ಥಿತಿಯಲ್ಲಿಯೇ ನಾವು ಪೋಟೊ ತೆಗೆದಿರುವುದಿಲ್ಲ. ದನದ ಮಾಂಸ ಮಧ್ಯದ ಸೀಟ್ ಮೇಲೆ ಮತ್ತು ಹಿಂದೆ ಡಿಕ್ಕಿಯಲ್ಲಿ ಇತ್ತು. ಸದ್ರಿ ವಾಹನದಕ್ಕೆ

ಮಧ್ಯದಲ್ಲಿಯೂ ಸಹಾ ಸೀಟ್ ಇತ್ತು. ಸದ್ರಿ ಸೀಟ್ ಇರುವುದು ನಿಪಿ 2 ರಲ್ಲಿ ಕಂಡುಬರುತ್ತದೆ. 2 ನೇ ಸೀಟು ಸದ್ರಿ ವಾಹನದಲ್ಲಿ ಇದೆ ಎಂದು ಪಂಚನಾಮೆಯಲ್ಲಿ ಬರೆಸಿರುವುದಿಲ್ಲ. ತಾಡಪತ್ರೆಯಿಂದ ಮಾಂಸ ತೆಗೆದು ಬೇರೆ ಚೀಲಕ್ಕೆ ಹಾಕಿ ನಂತರ ತಾಡಪತ್ರೆ ವಶಕ್ಕೆ ಪಡೆದಿರುತ್ತೇವೆ. ತಾಡಪತ್ರೆಯ ಮೇಲೆ ಚೀಟಿ ಅಂಟಿಸಿ ಅದಕ್ಕೆ ಸಾಕ್ಷಿದಾರರ ಸಹಿ ಪಡೆದಿರುವುದಿಲ್ಲ.

ಆರೋಪಿ ಓಡಿಹೋಗುವಾಗ ಮೇಲ್ನೋಟಕ್ಕೆ ಅವನನ್ನು ನೋಡಿದ್ದೆ, ನಂತರ ಠಾಣೆಗೆ ಅವನನ್ನು ಹಾಜರುಪಡಿಸಿದಾಗ ನಾನು ಅವನನ್ನು ನೋಡಿ ಗುರುತಿಸುತ್ತೇನೆ. ಸದ್ರಿ ದಿನ ಆರೋಪಿ ಸರ್ಕಲ್ ನಲ್ಲಿರುವ ಸುಮುಖ ಹೋಟೆಲ್ ಕಡೆ ಓಡಿಹೋಗಿರುತ್ತಾನೆ. ನಾವು ಸುಮುಖ ಹೊಟೆಲ್ ಗಿಂತ ಹಿಂದೆ ಇದ್ದೆವು. ಸುಮುಖ ಹೋಟೆಲ್ ಹೊನ್ನಾವರದಿಂದ ಗೇರುಸೊಪ್ಪಕ್ಕೆ ಹೋಗುವ ರಸ್ತೆಯ ಪಶ್ಚಿಮ ಕಡೆ 20 ಅ ಡಿ ದೂರದಲ್ಲಿದೆ ಎಂದರೆ ಸಾಕ್ಷಿ ಪೂರ್ವಕ್ಕೆ ಇದೆ ಎಂದು ನುಡಿಯುತ್ತಾರೆ. ಸರ್ಕಲ್ ನಿಂದ ಉತ್ತರ ದಿಕ್ಕಿಗೆ ಯಾವದೇ ರಸ್ತೆ ಬರುವುದಿಲ್ಲ ಎಂದರೆ ಸರಿಯಲ್ಲ. ಅಂಕಿ ಸಂಖ್ಯೆಗಾಗಿ ಈ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

ಪ್ರ ದ ನ್ಯಾದಂ ಹೊನ್ನಾವರ.